ಮಲ್ಲನಗೌಡ ಸಿ. ಪಾಟೀಲ, ರಂಭಾಪೂರ

*ನಗು ಆರೋಗ್ಯಕ್ಕೆ ಒಳ್ಳೆಯದು. ಆದರೆ ನಗುವ ಹೆಣ್ಣನ್ನು ನಂಬಬೇಡ ಎನ್ನುತ್ತಾರೆ. ಏಕೆ?*



ಹೆಣ್ಣಿನ ನಗುವಿನಿಂದ ಹಲವರ ಮೈಬಿಸಿ, ಬಿಪಿ ಏರುವಿಕೆ, ಚಿತ್ತಸ್ವಾಸ್ಥ್ಯ ಕದಡುವುದು ಆಗುವುದಂತಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

*ಮತ ಯಾಚನೆಗೂ, ವಿಶ್ವಾಸಮತ ಯಾಚನೆಗೂ ಏನು ವ್ಯತ್ಯಾಸ?*

ಮತ ಯಾಚನೆ ಜಾತ್ರೆ; ವಿಶ್ವಾಸಮತ ಯಾಚನೆ ಸಂತೆ.

ಜಾಕೋಬ್ ಡಿಸೋಜ, ಕುರುವಳ್ಳಿ

*ಪ್ರಜಾಪ್ರಭುತ್ವ ಈಗ ಹೇಗಿದೆ?*

ಬೆಂಗಳೂರಿನ ವಿದ್ಯಾವಂತ ಬೇಜವಾಬ್ದಾರಿ ಮತದಾರನಂತಹವರಿಂದ, ಸಂಪೂರ್ಣ ಖಿಚಡಿಯಾಗಿದೆ.

ಸಾವಿತ್ರಮ್ಮ ವಿಭೂತಿ, ಹರಿಹರ

*ಸುಳ್ಳು ಭವಿಷ್ಯ ಹೇಳುವ ವೃತ್ತಿಯನ್ನು ಕಾಯಕ ಎಂದು ಹೇಳಲು ಸಾಧ್ಯವೆ?*




ಸುಳ್ಳೇ ಜೀವಾಳವಾದ ಜಾಹೀರಾತು, ವಕೀಲಿಕೆ, ರಾಜಕಾರಣಗಳನ್ನು ಕಾಯಕ ಎಂದು ಒಪ್ಪಿರುವಾಗ...

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಚಂದ್ರ ತಂಪು; ಸೂರ್ಯ ಬಿಸಿ. ಏಕೆ?*

ಚಂದ್ರನದು ನೈಟ್ ಡ್ಯೂಟಿಯಾದ್ದರಿಂದ ಕೂಲ್; ಸೂರ್ಯನಿಗೆ ಡೈಲಿ ಆರಕ್ಕೇ ಡ್ಯೂಟಿ; ಎಂಥವರಿಗೂ ಮೈಯುರಿಯುವುದು ಸಹಜ!

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

*ಆದರ್ಶ ಶಿಕ್ಷಕ ಪ್ರಶಸ್ತಿ ಇರುವ ಹಾಗೆ ಆದರ್ಶ ಶಾಸಕ ಪ್ರಶಸ್ತಿ ಯಾಕಿಲ್ಲ?*

ಸುಂದರ ಕುರೂಪಿ ಪ್ರಶಸ್ತಿ ನೀಡಿ ಎಂದಂತಾಯಿತು! ಶಾಸಕ ಮತ್ತು ಆದರ್ಶ ವಿರುದ್ಧ ಪದಗಳು.

ಕುಮಾರ ಚಲವಾದಿ, ಹಾಸನ

*ಮಾತನಾಡಿದ್ದು ತಪ್ಪು ಎಂದು ಅರಿವಾದಾಗ ಏನು ಮಾಡಬೇಕು ಗುರೂಜಿ?*

ಎಲ್ಲಿ? ಪ್ರೈವೇಟಲ್ಲಾದರೆ ತಪ್ಪೊಪ್ಪಿಕೊಳ್ಳಿ. ಪಬ್ಲಿಕ್ಕಲ್ಲಾದರೆ ವಾಹಿನಿಗಳು ಉಜ್ಜೀ ಉಜ್ಜೀ ಸುಸ್ತಾಗುವವರೆಗೆ ಸಹಿಸಿಕೊಳ್ಳಿ.

ಎಚ್.ಆರ್. ದೇಸಾಯಿ, ರಾಯಚೂರು

*ಸಮಾಜ ಲಿವಿಂಗ್ ಟುಗೆದರ್ ಪದ್ಧತಿ ಜಾರಿಗೆ ತಂದರೆ ಮದುವೆಗೆ ಖರ್ಚಾಗುವ ಲಕ್ಷಾಂತರ ಹಣ ಉಳಿಸಬಹುದಲ್ಲವೆ?*

ಕಾಡುಮನುಷ್ಯರದೂ ಲಿವಿಂಗ್ ಟುಗೆದರ್ರೇ; ಲಗ್ನ ನಾಗರಿಕತೆಯ ಲಕ್ಷಣ. ಸರಳವಿವಾಹ ಪ್ರಬುದ್ಧತೆಯ ಲಕ್ಷಣ.

ಬೂಕನಕೆರೆ ವಿಜೇಂದ್ರ, ಮೈಸೂರು

*ಕೆಟ್ಟವರೇ ಚೆನ್ನಾಗಿ ಬದುಕುತ್ತಾರಲ್ಲ?*

ಶ್ವಾನಶವವೇ ಹಾಗೆ; ದುರ್ವಾಸನೆಯೆಂದು ಜನ ಹತ್ತಿರ ಸುಳಿಯದ್ದರಿಂದ ದೀರ್ಘಕಾಲ ಉಳಿಯುತ್ತದೆ.

ನರಸಿಂಹ ಪೈ, ಹೊನ್ನಾವರ

*ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು. ಏಕೆ?*

ಐಲೈಲಾಗಿ ಆಡಿದರೂ, ಶುದ್ಧ ಮೊದ್ದಾದರೂ ಪ್ರೀತಿ ಮತ್ತು ಪೀಠ ದೊರೆಯುವುದು ಇಲ್ಲಿ ಮಾತ್ರವಾದ್ದರಿಂದ.

ಅಮರಯ್ಯಾ ಪತ್ರಿಮಠ, ಶೋರಾಪೂರ

*ನಮ್ಮ ಜೀವನ ಕಿರು ಕಾದಂಬರಿಯೋ, ಧಾರಾವಾಹಿಯೋ, ಪುರಾಣವೋ?*

ಮುಪ್ಪು ಪುರಾಣ; ವೈವಾಹಿಕ ಜೀವನ ಧಾರಾವಾಹಿ, ಯೌವನ ಕಿರು ಕಾದಂಬರಿ, ಬಾಲ್ಯ ರಗಳೆ.

ವಿ. ಹಮೀದ್, ವಿಟ್ಲ

*ದ್ವಾಪರ ಯುಗದಲ್ಲಿ ಪಾಂಡವರು ಗೆದ್ದರು. ಈ ಯುಗದಲ್ಲಿ..?*

ಮತದಾರರ ದೌರ್ಬಲ್ಯಕ್ಕೆ ತಕ್ಕಂತೆ ರೆಸ್–ಪಾಂಡವರು (respond ಅವರು).

## ಬಹುಮಾನಿತ ಪ್ರಶ್ನೆ

ಎಂ.ಎ. ಕುಮಾರ್, ಬೆಂಗಳೂರು

*ನಾವು ತಿನ್ನುವ ತಿಂಡಿಗಳಿಗೆಲ್ಲ ಹೆಸರನ್ನು ಇಟ್ಟವರು ಯಾರು?*

ತಿಂದು ಅನುಭವಿಸಿದವರು! ರಟ್ಟಿನಂತದ್ದು ರೊಟ್ಟಿ; ಸಪ್ಪೆ ಅತಿ – ಸ(ಚ)ಪಾತಿ; ಹೆಸರೇನೋ ಒಂದು ಇಡಲಿ – ಇಡ್ಲಿ...

ಮಹಾವೀರ ಕಾಸರ, ಶಿವಮೊಗ್ಗ

*ಕನ್ನಡಿಗೂ, ಕನ್ನಡಕ್ಕೂ ಇರುವ ವ್ಯತ್ಯಾಸವೇನು?*

ಕನ್ನಡಿಗರು ಕನ್ನಡಿಗೆ ಮುಖ ತೋರಿಸುತ್ತಾರೆ, ಕನ್ನಡಕ್ಕೆ ಬೆನ್ನು ತೋರಿಸುತ್ತಾರೆ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

*ವಿವಾದಗಳಿಗೂ, ರಾಜಕಾರಣಿಗಳಿಗೂ ಹೆಚ್ಚು ಸಂಬಂಧ. ಏಕೆ?*

ಪೂರ್ವಜನ್ಮದ ವಾಸನೆ; ಆಗ ವಿವಾದಗಳು ತಿಪ್ಪೆಗಳಾಗಿದ್ದವು, ರಾಜಕಾರಣಿ ತಿಪ್ಪೆಯ ಹುಳು.

ಹೆಚ್. ಗೋಪಿನಾಥ್, ಬಳ್ಳಾರಿ

*ಪ್ರತಿಯೊಬ್ಬರ ಜೀವನದಲ್ಲಿ ಬರುವ ಅತ್ಯಂತ ಮಹತ್ವದ ದಿನ ಯಾವುದು?*

ಜೀವನವನ್ನು ರೂಪಿಸುವ ವಿದ್ಯೆಯ ಕಲಿಕೆ ಆರಂಭಿಸಿದ ದಿನ.

ಬೆಟ್ಟಹಳ್ಳಿ ಗೋಪಿನಾಥ, ಸೂಲಿಬೆಲೆ

*ಅನುಮಾನ ಎಂಬುದು ಹುಟ್ಟಿದ್ದು ಹೆಣ್ಣಿನಲ್ಲೋ, ಗಂಡಿನಲ್ಲೋ ಗುರುಗಳೆ?*

ಅಮೃತ ಹಂಚುವಾಗ ಸುರರು ವಂಚಿಸಬಹುದೆಂದು ಸುರರ ಮಧ್ಯೆ ಕುಳಿತ ಗಂಡು – ರಾಹುಕೇತುವಿನಲ್ಲಿ.

ಜೆ. ಪ್ರದೀಪ್ ಕುಮಾರ್, ಹೂವಿನಹಡಗಲಿ

*ತಂದೆ-ತಾಯಿ-ಮಕ್ಕಳು; ಅತ್ತೆ-ಮಾವ-ಸೊಸೆ; ಅತ್ತೆ-ಮಾವ-ಅಳಿಯ; ಈ ಮೂರು ಸಂಬಂಧಗಳಲ್ಲಿ ಯಾವುದು ಹೆಚ್ಚು ಗಟ್ಟಿ?*

ಅತ್ತೆ–ಮಾವ–ಸೊಸೆಯೇ; ಇಲ್ಲಿ 2 ಗಟ್ಟಿ ಧ್ವನಿ, 1 ಮೌನ ಇವೆ. ಮಿಕ್ಕವಲ್ಲಿ 2 ಮೌನ, 1 ಗಟ್ಟಿ.

ಎನ್. ಗೋಪಾಲರಾವ್, ಬೆಂಗಳೂರು

*ಅವತಾರ ಪುರುಷರ ಬಗ್ಗೆ ಮಾತ್ರ ಕೇಳಿದ್ದೀವಿ. ಅವತಾರ ಮಹಿಳೆಯರ ಬಗ್ಗೆ ಯಾಕೆ ವಿವರಗಳಿಲ್ಲ?*

ಪ್ರತಿದಿನ ಕಾಣುವುದಕ್ಕೆ ವಿವರವೇಕೆ! ಹತ್ತಿರದ ಬ್ಯೂಟಿ ಪಾರ್ಲರ್ ಮುಂದೆ ನಿಲ್ಲಿ; ವಿಧವಿಧದ ಅವತಾರಗಳು ಕಾಣುತ್ತವೆ.

ಮೋಹನರಾಜು ಎಸ್.ಎ. ಶಿವಮೊಗ್ಗ

*ಮಾನವ ಜನ್ಮ ದೊಡ್ಡದು ಎನ್ನುತ್ತಾರೆ. ಹಾಗಾದರೆ ಯಾರ ಜನ್ಮ ಚಿಕ್ಕದು?*

ಆಕಾರದಿಂದ ಮಾನವ, ಆಚಾರದಿಂದ ಪಶು ಆದವನದು.

■ ರಾಮ್